**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.253/2021**

**ಪಿ.ಡಬ್ಲ್ಯೂ- 1**

**ಪ್ರಮಾಣೀಕರಿಸಿದ ದಿನಾಂಕ:02.07.2024**

**ಪಾಟೀ ಸವಾಲು : ಪ್ರತಿವಾದಿ ನಂ.1 ರಿಂದ 4 ಪರ ವಕೀಲರಿಂದ : -**

ನಾನು ವಾಸವಿರುವ ವಿಳಾಸ ನಾರಾಯಣಕೆರೆ ಹೋಸಕೋಟೆ ತಾಲ್ಲೂಕು ಇರುತ್ತದೆ. ಸದರಿ ವಿಳಾಸ ಹೊರತುಪಡಿಸಿ ನನಗೆ ಬೇರೆ ವಿಳಾಸವಿರುವುದಿಲ್ಲ. ನಾನು, ನಾಗೇಶ್, ನಾಗರಾಜ್, ಬಾಬು, ಸಂಪತ್ ಕುಮಾರ್, ವೆಂಕಟೇಶ್, ಶ್ರೀರಾಮರೆಡ್ಡಿರವರ ವಿರುದ್ದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಪ್ರತಿವಾದಿಗಳ ವಿರುದ್ದ ಅವರು ನನಗೆ ತೊಂದರೆ ನೀಡಬಾರದೆಂದು ದಾವೆ ಸಲ್ಲಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟವಾಗಿ ಯಾವ ಪ್ರತಿವಾದಿ ಆಸ್ತಿಯ ಯಾವ ಭಾಗಕ್ಕೆ, ತೊಂದರೆ ನೀಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಇರಬಹುದು. ದಾವಾ ಸ್ವತ್ತಿನ ಸಂಖ್ಯೆ: ಹಳೇ ಸರ್ವೆ ಸಂಖ್ಯೆ:223/ಪಿ-5, ಹೊಸ ಸಂಖ್ಯೆ:223 ಇದ್ದು, ಅದು 3 ಎಕರೆ ವಿಸ್ತೀರ್ಣದಾಗಿರುತ್ತದೆ. ದಾವಾ ಸ್ವತ್ತಿನ ಚಕ್ಕಬಂದಿ, ಪೂರ್ವಕ್ಕೆ - ಉತ್ತನಹಳ್ಳಿ ರಾಮಯ್ಯ, ಪಶ್ಚಿಮಕ್ಕೆ - ಇರುವ ಸ್ವತ್ತಿನ ಮಾಲೀಕರ ಹೆಸರು ನೆನಪಾಗುತ್ತಿಲ್ಲ, ಉತ್ತರಕ್ಕೆ - ರಸ್ತೆ, ದಕ್ಷಿಣಕ್ಕೆ ಚಿಕ್ಕಮುತ್ತಾರಾಯರೆಡ್ಡಿ ಸ್ವತ್ತುಗಳು ಇರುತ್ತವೆ. ಹಳೇ ಸಂಖ್ಯೆ ಯಲ್ಲಿರುವ 'ಪಿ' ಎಂಬ ಶಬ್ದವು ಗೋಮಾಳ ಜಮೀನಿನ್ನು ಸೂಚಿಸುತ್ತದೆ. ಸರ್ವೆ ನಂ.223 ಒಟ್ಟು 13 ಎಕರೆ ಇರುತ್ತದೆ. ನನ್ನ ವಿರುದ್ದ ಸುಮಾರು 2-3 ದಾವೆಗಳು ಇರುತ್ತವೆ. ನನಗೆ ನ್ಯಾಯಾಲಯಕ್ಕೆ ಬಂದು ಅನುಭವವಿರುತ್ತದೆ. ನನ್ನ ವಾದ ಪತ್ರದಲ್ಲಿ ನನಗೆ ಯಾರು ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಮಾತ್ರ ಓದಲು ಬರುತ್ತದೆ. ವಾದಪತ್ರದಲ್ಲಿ ನಾನು ಅದರಲ್ಲಿರುವ ಅಂಶಗಳನ್ನು ಓದಿಸಿ ತಿಳಿದುಕೊಂಡು, ಸಹಿ ಮಾಡಿರುತ್ತೇನೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ನನಗೆ ದಿ:28.06.2017 ರಂದು ಕ್ರಯಪತ್ರ ವಾಗಿರುತ್ತದೆ. ಅದನ್ನು ನ್ಯಾಯಾಲಯದ ಮುಖಾಂತರ ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ಬರೆದುಕೊಟ್ಟಿರುತ್ತಾರೆ. ನಾನು ಕ್ರಯಪತ್ರ ಬರೆದುಕೊಡಬೇಕೆಂದು ದಾವೆ ಸಲ್ಲಿಸಿಕೊಂಡಿದ್ದೆ. ಆ ಪ್ರಕಾರವಾಗಿ ನನ್ನ ಪರವಾಗಿ ಆದೇಶವಾದ ಮೇಲೆ ನ್ಯಾಯಾಲಯದ ಮೂಲಕ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ.

ನಾನು ಸಲ್ಲಿಸಿದ ದಾವೆ ಸಂಖ್ಯೆ:223/2011 ಇರುತ್ತದೆ. ಸದರಿ ದಾವೆಯನ್ನು ನಾನು ಪೂಜಪ್ಪ ಬಿನ್ ನರಸಿಂಹಯ್ಯ, ಪೂಜಪ್ಪ ಬಿನ್ ಗೌನಪ್ಪ ನವರ ವಿರುದ್ದ ಸಲ್ಲಿಸಿದ್ದೆ. ಸದರಿಯವರ ಹೆಸರಿನಲ್ಲಿ ಖಾತೆ, ಪಹಣಿ ಇದ್ದ ಕಾರಣ ಸದರಿ ದಾವೆಯನ್ನು ಸಲ್ಲಿಸಿದ್ದೆ. ಸದರಿ ಖಾತೆ, ಪಹಿಣಿಗಳು 2001-02 ರಿಂದ ಮತ್ತು ಅದರ ಹಿಂದಿನಿಂದಲೂ ಸಹ, ಸದರಿಯವರ ಹೆಸರಿನಲ್ಲಿ ಇದ್ದವು. ಸಾಕ್ಷಿಗೆ ಸದರಿ ದಾವೆಯ ವಾದಪತ್ರವನ್ನು ತೋರಿಸಲಾಗಿ ಸಾಕ್ಷಿ ಒಪ್ಪಿದ್ದರಿಂದ ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ದಾವೆ ನನ್ನ ಪರವಾಗಿ ಆದೇಶವಾಗಿರುತ್ತದೆ. ಸಾಕ್ಷಿಗೆ ಸದರಿ ದಾವೆಯ ತೀರ್ಪಿನ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ನನಗೆ ಓದಲು ಬಾರದಿದ್ದರೂ ಸಹ, ನಿ.ಡಿ.1 ಮತ್ತು 2 ರಲ್ಲಿರುವ ದಾವೆಯ ಸಂಖ್ಯೆಯನ್ನು ನೋಡಿ ಅವುಗಳನ್ನು ಗುರುತಿಸಿರುತ್ತೇನೆ. ಸದರಿ ದಾವೆಯಲ್ಲಿ ಆದೇಶವಾದ ನಂತರ ನಾನು ಇನ್ನೋಂದು ಪ್ರಕರಣವನ್ನು ದಾಖಲಿಸಿದೆ. ಸದರಿ ಪ್ರಕರಣ ಸಂಖ್ಯೆ ಇ.ಪಿ.ನಂ.1515/2015 ಆಗಿರುತ್ತದೆ. ಸದರಿ ಪ್ರಕರಣದ ಅರ್ಜಿಯ ಪ್ರತಿವಾದಿ, ಆದೇಶಪುಟಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ.3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಇ.ಪಿ ಪ್ರಕರಣ ನಡೆಯುವಾಗ ನಾನು ಹೊಸ ದಾಖಲೆ ಸಲ್ಲಿಸಿದ ಬಗ್ಗೆ ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿಯೇ ನನಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಕ್ರಯಪತ್ರ ಮಾಡಿಸಿಕೊಳ್ಳುವ ಮೊದಲು ಆ ಪ್ರಕರಣದ ಎದುರುದಾರರ ಹೆಸರಿನಲ್ಲಿ ಪಹಣಿ ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ಪಹಣಿಗಳು ಯಾವ ವರ್ಷದ್ದಾಗಿದ್ದವು ಎಂದರೆ ನನಗೆ ನೆನಪಿಲ್ಲ. ಅಮಲ್ಜಾರಿ ಪ್ರಕರಣದಲ್ಲಿ ನಾನು ಸದರಿ ಪಹಣೀಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನನ್ನು ಪ್ರತಿನಿಧಿಸುತ್ತಿದ್ದ ಶ್ರೀ.ಟಿ.ಸಿ.ಎನ್ ವಕೀಲರಿಗೆ ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**